12.40 ಪಿ.ಎಂ.

ಹಕ್ಕುಚ್ಯುತಿ ಪ್ರಸ್ತಾವ

ಶ್ರೀ ರಾಮಕೃಷ್ಣ ಹೆಗಡೆಯವರು ಮಾಡಿದ ಆರೋಪದ ಬಗ್ಗೆ.

ಲೆಜಿಸ್ಲೇಚರ್ಸ್ ಮೀಟಿಂಗ್‌ನಲ್ಲಿ ನಮಗೆ ಸರ್ಟಿಫಿಕೇಟ್ ಬಂದಿದೆಯೆಂದು ಹೇಳಿದ್ದಾರೆ. ಇದಕ್ಕೆ ಸರ್ಕಾರ ಉತ್ತರ ಕೊಡಬೇಕು. ಡಿ.ಪಿ.ಎ.ಆರ್. ಸೆಕ್ರೆಟರಿ ಒಳಗೊಂಡಂತೆ ಒಟ್ಟು 5 ಜನ ಸಕ್ರೆಟರಿಗಳ ಟೆಲಿಫೋನ್‌ಗಳನ್ನು ಡಿಸ್‌ಕನೆಕ್ಟ್ ಆಗಿರುವುದು ಸತ್ಯವೆ? ಇದಕ್ಕೆ ಸರ್ಕಾರ ಉತ್ತರ ಕೊಡಲಿ.

Prof M.D. Nanjudaswamy : sir , Iam on a point of order. Actually. I wanted to raise a question of privilege.

ಆದರೆ ನಡುವೆ ಬೇರೆ ಏನೇನೋ ಆಯಿತು. I had to raise a point of order ವಿರೋಧ ಪಕ್ಷದ ನಾಯಕರು ಏನು ಮಂಡನೆ ಮಾಡುತ್ತಾರೆ ಅದರ ಮೇಲೆ ನಾನು ಮುಕ್ತ ಮನಸ್ಸಿನಿಂದ ಚರ್ಚೆ ಮಾಡುವಂಥ ಪರಿಸ್ಥಿತಿಯಲ್ಲಿ ಇಲ್ಲ ಏಕೆಂದರೆ, ಈ ಸದನದಲ್ಲಿ ನಾನು ಯಾವ ರೀತಿ ಕೆಲಸ ಮಾಡಬೇಕು? ಆ ರೀತಿ ಕೆಲಸ ಮಾಡುವುದಕ್ಕೆ ಆಗದೇ ಇರುವ ರೀತಿ ನನ್ನ ಹಕ್ಕಿಗೆ ಚ್ಯುತಿ ಬಂದಿದೆ. ಆ ಕಾರಣ ಈ ಸಮಸ್ಯೆಯನ್ನು ಸನ್ಮಾನ್ಯ ಸಭಾಧ್ಯಕ್ಷರು ಆದಷ್ಟು ಬೇಗೆ ಬಗೆ ಹರಿಸಿದ ಮೇಲೆ ನನ್ನ ಹಕ್ಕುಗಳನ್ನು ರಕ್ಷಣೆ ಮಾಡಿಕೊಟ್ಟ ನಂತರ ನಾನು ಅರ್ಥ ಪೂರ್ಣವಾಗಿ ಈ ಸದನದಲ್ಲಿ ಭಾಗವಹಿಸಬಹುದು. ನಾನು ಕಳೆದ 3 ದಿವಸಗಳಿಂದ ಈ ಸಭೆಯಲ್ಲಿ ಸರಿಯಾಗಿ ಭಾಗವಹಿಸುತ್ತಿಲ್ಲ ಎಂಬುದನ್ನು ತಾವು ಗಮನಿಸಿರಬೇಕು. ನಿನ್ನೆಯೂ ಕೂಡಾ ಮಂಡಿಸಿದಂಥ ತಿದ್ದುಪಡಿಗಳ ಮತ್ತು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆ ನಡೆಯುವ ಕಾಲದಲ್ಲೂ ನಾನು ಸದನದಲ್ಲಿ ಇರಲಿಲ್ಲ.

ಅಧ್ಯಕ್ಷರು : ಹೌದು ನೀವು ಏಕೆ ಇರಲಿಲ್ಲವೆಂದು ನಾನು ಯೋಚನೆ ಮಾಡಿದ್ದೆ.

ಪ್ರೊ. ಎಂ.ಡಿ.ನಂಜುಂಡಸ್ವಾಮಿ : ತಾವು ಈ ಸಮಸ್ಯೆಯನ್ನು ಬೇಗ ಬಗೆಹರಿಸಬೇಕು. ಇಲ್ಲದೆ ಹೋದರೆ ಈ ಬಜೆಟ್ ಅಧಿವೇಶನದಲ್ಲಿ ಪೂರ್ತಿ ಭಾಗವಹಿಸುವುದಕ್ಕೆ ನನಗೆ ಸಾಧ್ಯವಾಗುವುದಿಲ್ಲ. ಕಾರಣ ಇಷ್ಟೇ : ಈ ಸದನದ ಒಬ್ಬ ಹಿರಿಯ ಸದಸ್ಯರು ನನ್ನ ಮೇಲೆ ಆರೋಪ ಮಾಡಿದ್ದಾರೆ. ನಾನು ಒಬ್ಬ ವಿರೋಧ ಪಕ್ಷದ ಸದಸ್ಯನಾಗಿ ಸಮರ್ಪಕವಾಗಿ ನನ್ನ ಕರ್ತವ್ಯವನ್ನು ಈ ಸದನದಲ್ಲಿ ಮಾಡುತ್ತಿಲ್ಲ, ಅದಕ್ಕೆ ಕಾರಣ ಈ ಸರ್ಕಾರದಿಂದ ನಾನು ಒಂದು ದಂತ ವೈದ್ಯಕಾಲೇಜಿನ ಪರವಾನಿಗೆಯನ್ನು ಸ್ವಂತಕ್ಕೆ ಪಡೆದಿದ್ದೇನೆ. ಆ ಕಾರಣ ನಾನು ಈ ಸರ್ಕಾರದ ವಿರುದ್ಧ ವಿರೋಧ ವ್ಯಕ್ತಪಡಿಸುತ್ತಿಲ್ಲ. ಈ ಸರ್ಕಾರದ ವಿರುದ್ಧ ಬಾಯಿ ಹೊಲೆದು ಕೊಂಡಿದ್ದೇನೆ ಎನ್ನುವ ಪದಗಳನ್ನು ಉಪಯೋಗಿಸಿದ್ದಾರೆ.

This amounts to a clear case of breach of privilege and contempt of the House which deserves punishment. ಆ ಕಾರಣ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಮತ್ತು ಈ ಹೇಳಿಕೆಗಳು ಸದನದ ಒಳಗೆ ಆಗಿಲ್ಲ, ಸದನದ ಹೊರಗೆ ಆಗಿದೆ ಎಂದರೂ ಕೂಡ ಇದು ಪ್ರಿವಿಲೇಜ್ ವ್ಯಾಪ್ತಿಗೆ ಬರುತ್ತದೆ.

I am reading from authrities.that such acts should be punished either by imprisonment or reprimand, such persons who are quilty of contempt of the House or committed breach of privilege. Should be punished i rrespective of the offence committed within the House or beyond these walls. ಆ ಕಾರಣ ಸಂಬಂಧಪಟ್ಟ ವ್ಯಕ್ತಿ ಸನ್ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು, ಅವರಿಗೆ ತಾವು ಅವಕಾಶ ಕೊಡಬಹುದು. ಅವರು ಮಾಡಿರುವ ಆರೋಪವನ್ನು ಅವರು ಈ ಸದನಕ್ಕೆ ಬಂದು ಸಾಬೀತು ಮಾಡಬಹುದು. ಇಲ್ಲಾ, ತಾವು ಸೂಕ್ತ ಕಂಡಕ್ರಮವನ್ನು ಅವರ ಮೇಲೆ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು : ನಿಮ್ಮ ಕಾಗದ 25-2-92ರಂದು ನನ್ನ ಕಛೇರಿಗೆ ಬಂತು. ಅದನ್ನು ನನ್ನ ಗಮನಕ್ಕೆ 25ನೇ ತಾರೀಖಿನ ದಿವಸವೇ ತೆಗೆದುಕೊಂಡು ಬಂದರು. It is a notice to raise a question of breach of privilege against shri Ramakrishna Hegde, Member of Karnataka Legislative Assembly. ನಾನು ನಿಮ್ಮ ಒಕ್ಕಣೆ ಮತ್ತು ಶ್ರೀ ರಾಮಕೃಷ್ಣ ಹೆಗಡೆಯವರು ಹೇಳಿದ್ದಾರೆಂದು ಉಲ್ಲೇಖಿಸಿರತಕ್ಕಂಥ ಪತ್ರಿಕಾ ವರದಿಯನ್ನು ತಾವು ಕೂಡ ನನಗೆ ಕಳುಹಿಸಿಕೊಟ್ಟಿದ್ದೀರಿ. alongwith the set of the Government orders permitting dental College. I have also seen it. I have gone through it. ರೈಟ್, ಫೈಲ್‌ನಲ್ಲಿ ಇದೆ. ನಾನು ಇದರ ಬಗ್ಗೆ ಮೇ ಪಾರ್ಲಿಮೆಂಟರಿ ಪ್ರ್ಯಾಕ್ಟೀಸ್ ನೋಡಿದ್ದೇನೆ. ಕೌಲ್ ಅಂಡ್ ಶಕ್ಧರ್ ಅವರನ್ನೂ ನೋಡಿದ್ದೇನೆ. ಮೇ ಪಾರ್ಲಿಮೆಂಟರಿ ಪ್ರ್ಯಾಕ್ಟೀಸ್ ಅದನ್ನು ನೋಡಿದ್ದೇವೆ.

I have seen your notice. I have gone through it . Iam quoting May's parliamentary parctice as well as kaul and shakdher parliamentary practice and procedure. I quote May's parliamentary practice in this behalf which reads thus.

"Where the matter of complaint is charged, alleged to have been made by one Member against another Member in a speech outside the House, it is usual , if the Member admits the correctness of the report and states that he is in a position to prove the charge and is willing to admit to do so, to give him an opportunity of establishing his charge.

Sri K.H. Ranganath : I rise to a point of order. I have heard the plea of prof. M.D. Nanjundswamy. He wanted to raise a question of privilege. Now, he said that he is raising a point of order.

Mr. Speaker : In any case, even if the professor had not raised this subject. I myself would have taken note of it because all the relevant papers are before me. I have applied my mind to the notice given by Professor. Now he has raised it. I would like to dispose it of before I call upon the Hon. Leader of the Opposition. I would like to hear his

submission on his adjournment motion. I would also like to quote the relevant portion from kaul and shakdher. It reads thus.

"Where a complaint of on alleged breach of Privilege and contempt of the House,based on a newspaper report, an alleged statement made by a meber of the House, outside the House, which the Member concerned deny having made."

I am writing to Sri Ramkrishna Hegde to let me know, if he has made the allegation which the newspaper has reported. Then after hearing the hon. Member Sri Ramkrishna Hegde, I will come back to this House again and place the entire matter. In the meanwhile, I request the hon. Member prof. Nanjundswamy to actively participate in the proceedings of this House.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಒಂದೇ ಒಂದು ಮಾತು. ನನಗೆ ಇನ್ನೂ ಕೆಲವು ಜನತಾ ದಳದ ಹಿತೈಷಿಗಳು ಉಳಿದಿದ್ದಾರೆ. ಅವರು ನನಗೆ ಕೊಟ್ಟಿರುವ ಮಾಹಿತಿ ಪ್ರಕಾರ ಮಾನ್ಯ ರಾಮಕೃಷ್ಣ ಹೆಗಡೆ ಅವರು ನಾಳೆ ಸಂಜೆ ದೆಹಲಿಯಿಂದ ಇಲ್ಲಿಗೆ ಬರುತ್ತಾರೆಂದು ಗೊತ್ತಿದೆ. ಆ ಕಾರಣ ತಾವು ಆ ಸದಸ್ಯರಿಗೆ ನಾಡಿದ್ದು ಬೆಳಿಗ್ಗೆ ಅವರು ಇಲ್ಲಿ ರಾಜರಾಗಿ ವಿವರಣೆ ಕೊಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ ತಾವು ಹೇಳಿದ್ದೀರಿ ನಾನು ಸಕ್ರೀಯವಾಗಿ ಈ ಸದನದಲ್ಲಿ ಭಾಗವಹಿಸಬೇಕು ಎಂದು I have been a very sensitive man and it is not possible for me.

ಶ್ರೀ ವಾಟಾಳ್ ನಾಗರಾಜ್ : ನಾನು ಒಂದು ವಿಚಾರವನ್ನು ಹೇಳುತ್ತಿದ್ದೇನೆ. ಹಕ್ಕುಚ್ಯುತಿ ನಿರ್ಣಯವನ್ನು ನಾನು ಮತ್ತು ಮಾನ್ಯ ಬೈರೇಗೌಡರು ಸೇರಿಕೊಟ್ಟಿದ್ದೇವೆ.

ಅಧ್ಯಕ್ಷರು : ಇವತ್ತು ಬಂದಿದೆ. ಅದಕ್ಕೆ ನಾನು ನಾಳೆ ಪ್ರಸ್ತಾಪ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಿನ್ನೆ ತಾವು ಹೇಳಿದಿರಿ, ಈ ಸಭೆಯಲ್ಲಿ ಚರ್ಚೆಗೆ ಅವಕಾಶ ಕೊಡುತ್ತೇನೆ. ಕಳಿಸಿಕೊಡಿ ಎಂದು. ಕಳಿಸಿಕೊಟ್ಟಿದ್ದೇನೆ.

ಅಧ್ಯಕ್ಷರು : ನಿನ್ನೆ ಹೇಳಿದ್ದೀರಿ. ಇವತ್ತು ಬರೆದು ಕಳಿಸಿಕೊಟ್ಟಿದ್ದೀರಿ. ನಾಳೆ ಪ್ರಸ್ತಾವನೆ ಮಾಡುತ್ತೇನೆ. That is the sequence of events.ನಿನ್ನೆ ಹೇಳಿದ್ದೀರಿ ಹೌದೋ ಇವತ್ತು ಬರೆದು ಕಳಿಸಿದ್ದೀರಿ ಹೌದೋ, ನಾಳೆ ಪ್ರಸ್ತಾವನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಗಮನಕ್ಕೆ ಈ ವಿಷಯ ತರುತ್ತಿದ್ದೇನೆ. ಇದು ಬಹಳ ಪ್ರಾಮುಖ್ಯವಾದ ವಿಷಯ. ತಾವೇ ಹೇಳಿದಿರಿ ಬರೆದು ಕಳಿಸಿ ಎಂದು ಇಲ್ಲಿ ಇಡೀ ವಿರೋಧ ಪಕ್ಷಗಳಿಗೆ ದೂರದರ್ಶನದವರಿಂದ ಅಗೌರವ ಆಗಿದೆ.

ಅಧ್ಯಕ್ಷರು : ತಾವು ಇದನ್ನು ಅಪ್ಪಣೆ ಕೊಡಿಸಿದ್ದೀರಿ. ಇದನ್ನೆಲ್ಲಾ ತಾವು ಹೇಳಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಮನವಿ ಮಾಡುತ್ತಿದ್ದೇವೆ.

ಅಧ್ಯಕ್ಷರು : ತಾವು ಇದನ್ನೆಲ್ಲಾ ನಿನ್ನೆ ಹೇಳಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಅಪ್ಪಣೆ ಕೊಡಿಸತಕ್ಕ ಸ್ಥಳದಲ್ಲಿ ತಾವು ಇದ್ದೀರಿ. ನಮ್ಮದು ಬೇಡಿಕೆ ಮತ್ತು ಮನವಿ ಸ್ಥಾನದಲ್ಲಿ ಇದ್ದೇವೆ. ಆದ್ದರಿಂದ ನಾವು ತಮಗೆ ಅಪ್ಪಣೆ ಕೊಡುವುದಕ್ಕೆ ಅವಕಾಶ ಇಲ್ಲ.

ಅಧ್ಯಕ್ಷರು : ನಾಳೆ ತೆಗೆದುಕೊಳ್ಳೋಣ.

ನಿಲುವಳಿ ಸೂಚನೆ

ರಾಜ್ಯದಲ್ಲಿ ಅಸಮರ್ಪಕ ವಿದ್ಯುಚ್ಛಕ್ತಿಯ ನಿರ್ವಹಣೆ

ಶ್ರೀ ಡಿ.ಬಿ. ಚಂದ್ರೇಗೌಡ : 59-60ನೇ ವಿಧಿಯಂತೆ ಒಂದು ನಿಲುವಳಿ ಸೂಚನೆಯನ್ನು ನಾವೆಲ್ಲಾ ಕಳಿಸಿಕೊಟ್ಟಿದ್ದೇವೆ. ಬಹುತೇಕವಾಗಿ ಎಲ್ಲರೂ ಇದಕ್ಕೆ ಸಹಿ ಹಾಕಿದ್ದಾರೆ. ಈ ಸಮಸ್ಯೆ ಎಷ್ಟು ತೀಕ್ಷ್ಣವಾಗಿದೆ ಮೂವ ಪ್ರತಿಧ್ವನಿಯ ಕಾರಣ ಎಲ್ಲರೂ ಬಹುತೇಕವಾಗಿ ಸಹಿ ಹಾಕಿದ್ದಾರೆ.

ಮಾನ್ಯ ಅಧ್ಯಕ್ಷರೇ, ಕಳೆದ ಕೆಲವು ದಿವಸಗಳಿಂದ ರಾಜ್ಯದಲ್ಲಿ ವಿದ್ಯುತ್‌ಚ್ಛಕ್ತಿ ನಿರ್ವಹಣೆಯ ಬಗ್ಗೆ ನೋಡಿದರೆ ನಮಗೇ ಆಶ್ಚರ್ಯವಾಗುತ್ತದೆ. ಅಂದರೆ, ಈ ಬಾರಿ ವಿದ್ಯುತ್‌ಚ್ಛಕ್ತಿ ಉತ್ಪಾದನೆಗೆ ಅಗತ್ಯವಾಗಿರತಕ್ಕಂಥ ನೀರು ಲಿಂಗನಮಕ್ಕಿಯಲ್ಲಿ ಸಂಗ್ರಹವಾಗಿದೆ. ವಾರಾಹಿ ಕಾರ್ಯಾಗಾರ ತನ್ನ ಕೆಲಸವನ್ನು ಪ್ರಾರಂಭ ಮಾಡಿದೆ. ರಾಯಚೂರು ಥರ್ಮಲ್ ಪ್ರಾಜೆಕ್ಟ್‌ನಲ್ಲಿ ಪೂರ್ಣಪ್ರಮಾಣದ ವಿದ್ಯುತ್ ಉತ್ಪಾದನೆಯಾಗುತ್ತಾ ಇದೆ, ಹೈಡ್ರೋಪ್ರಾಜೆಕ್ಟ್‌ನಲ್ಲಿ ಉತ್ಪಾದನೆಯಾಗುತ್ತಾ ಇದೆ. ಇದನ್ನೆಲ್ಲಾ ನೋಡಿದಾಗ ಮಂಡಳಿಯ ಅಸಮರ್ಪಕವಾದಂಥ ಆಡಳಿತದ ದೋಷ ಹಾಗೂ ವಿತರಣೆಯಲ್ಲಿನ ಅಸಮಾಧಾನಕರವಾದಂಥ ನಿರ್ವಹಣೆಯಿಂದಾಗಿ ಪ್ರಕೃತಿಯು ಕೊಟ್ಟಂಥ ವರವನ್ನು ಜನರಿಗೆ ಈ ಸರಕಾರದವರು ಶಾಪವಾಗಿ ಪರಿವರ್ತಿಸಿದ್ದಾರೆ ಎಂದು ಹೇಳಬೇಕಾಗುತ್ತದೆ. ರಾಜ್ಯದಲ್ಲಿ ಇಂದು ಎಲ್ಲಿಯೂ ಕೂಡ ಒಂದು ಗಂಟೆಯ ಕಾಲದ ನಿರಂತರವಾದ ವಿದ್ಯುತ್ ಪೂರೈಕೆಯಾಗುತ್ತಿಲ್ಲ. ಈ ವಿಚಾರವನ್ನು ಎಲ್ಲಾ ಮಾನ್ಯ ಸದಸ್ಯರುಗಳು ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ನಾನು ವಿರೋಧಪಕ್ಷದ ನಾಯಕನಾಗಿ ಹೇಳುತ್ತಾ ಇಲ್ಲ. ಬಹುಶಃ ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥ ಪ್ರತಿಯೊಬ್ಬರಿಗೂ ಇದು ಆಗಿರತಕ್ಕಂಥ ಅನುಭವ ಎಂದು ಅಂದುಕೊಂಡಿದ್ದೇನೆ. ಒಂದು ಗಂಟೆ ಕೂಡ ಪೂರ್ತಿಯಾಗಿ ವಿದ್ಯುತ್‌ಚ್ಛಕ್ತಿ ಪೂರೈಕೆಯಾಗುತ್ತಿಲ್ಲ. ಈ ಒಂದು ಪರಿಸ್ಥಿತಿಯಿಂದ ಕೃಷಿ ಕೆಲಸ ಕಾರ್ಯಗಳಿಗೆ ತುಂಬಾ ತೊಂದರೆಯಾಗಿ ಸಂಪೂರ್ಣವಾಗಿ ನಿಂತು ಹೋಗಿದೆ. ಸುಡತಕ್ಕಂಥ ಬೇಸಿಗೆಯಲ್ಲಿ ಕುಡಿಯುವ ನೀರು ಇಲ್ಲ, ಗ್ರಾಮಾಂತರ ಪ್ರದೇಶಗಳಲ್ಲಿನ ವಿದ್ಯಾರ್ಥಿಗಳಿಗೆ ಸಾಯಂಕಾಲದ ಹೊತ್ತು ಓದಲು ಸಾಧ್ಯವಾಗುತ್ತಾ ಇಲ್ಲ. ಏನೋ ಡ್ರಿಪ್ಪಿಂಗ್ ಎಂದು ಹೇಳುತ್ತಾರೆ, ಒಟ್ಟಿನಲ್ಲಿ ನಮಗೆ ವಿದ್ಯುತ್ ಇಲ್ಲ, ದೀಪಗಳು ಇಲ್ಲ. ನಾವುಗಳು ಹಳ್ಳಿಯಿಂದ ಬರತಕ್ಕಂಥವರು. ಗ್ರಾಮಾಂತರ ಪ್ರದೇಶಗಳಲ್ಲಿ ಮಕ್ಕಳು ತಮ್ಮ ಅಭ್ಯಾಸವನ್ನು ಮಾಡಲು ಪರೀಕ್ಷೆ ಓದಲು ಅವರಿಗೆ ದೀಪ ಇಲ್ಲ. ಇನ್ನು ನಮ್ಮ ಪ್ಲಾಂಟೇಶನ ವಿಚಾರದಲ್ಲಿ ಹೇಳುವುದಾದರೆ, ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಸುಮಾರು 650ಕೋಟಿ ರೂಪಾಯಿಗಳ ವ್ಯವಹಾರ ಮಾಡತಕ್ಕಂಥ ಕಾಫಿಪ್ಲಾಂಟೇಶನ್‌ನಲ್ಲಿ ಸುಮಾರು 450 ಕೋಟಿಗಳಿಗಿಂತ ಹೆಚ್ಚು ವಿದೇಶಿ ವಿನಿಮಯ ಮಾಡಿಕೊಡತಕ್ಕಂಥ